**ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 19-07-2025 ರಂದು ಪ್ರಮಾಣ ಮಾಡಿಸಲಾಯಿತು**
ಮದ್ಯಂತರ ಅರ್ಜಿ ಆದೇಶದ ಮೇರೆಗೆ ಸಾಕ್ಷಿಯ ಪಾಟೀ ಸವಾಲಿಗೆ ಅವಕಾಶ ನೀಡಲಾಯಿತು.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಆರ್ ಸಿ ಎಚ್ ವಕೀಲರಿಂದಃ**

ನಾನು 7 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. 2012 ರಿಂದ 2022 ರವರೆಗೆ ನಾನು ಬ್ಯಾಂಕಿನಲ್ಲಿ ಸೇವೆ ಸಲ್ಲಿಸುತ್ತಿದ್ದೇನೆ. ನಿಪಿ-15 ರಲ್ಲಿ ಬರೆದ ವಿಷಯ ನನಗೆ ಗೊತ್ತಿದೆ. ಪೋಲೀಸರು ಪಂಚನಾಮೆಗೆ ಬಂದ ಬಗ್ಗೆ ಬರೆದಿರುತ್ತಾರೆ. ಬರೆದ ನಂತರ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಪೂರ್ತಿ ಓದಲು ಬಿಟ್ಟಿರುವುದಿಲ್ಲ. ನನಗೆ ಪಂಚನಾಮೆ ಬರೆದ ವಿಷಯ ನನಗೆ ಗೊತ್ತಿಲ್ಲ ಅಂದರೆ ನಿಜ. ಚಾಸಾ-1 ರವರು ನಮ್ಮ ಮೇಲಾಧಿಕಾರಿ ಆದ್ದರಿಂದ ಅವರ ಮಾತು ಕೇಳಿ ಸಹಿ ಮಾಡಿದ್ದೇನೆ, ಅದರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ ಅಂದರೆ ಸರಿಯಲ್ಲ. ನಾನು ಕಚೇರಿಯಲ್ಲಿ ಅಧಿಕಾರಿಗಳು ಕರೆದರೆ ಅವರಿಗೆ ಬೇಕಾದ ಸಾಮಗ್ರಿಗಳನ್ನು ಪೂರೈಸುವುದು, ಚಹಾ ವಿತರಿಸುವ ಕಾರ್ಯ ಮಾಡುತ್ತಿದ್ದೆ.

ಬ್ಯಾಂಕಿಗೆ ಬರುವ ಗ್ರಾಹಕರ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿತರು ಬ್ಯಾಂಕಿಗೆ ಬಂದು ಹೋಗಿ ಮಾಡುತ್ತಿದ್ದರು. ಆರೋಪಿತರು ಮೇಲಿಂದ ಮೇಲೆ ಬರುತ್ತಿದ್ದುದರಿಂದ ಅವರನ್ನು ನಾನು ಬ್ಯಾಂಕಿನಲ್ಲಿ ನೋಡಿದ್ದೇನೆ. 2015-16 ರಲ್ಲಿ ಬ್ಯಾಂಕಿಗೆ ಬಂದು ಹೋಗಿ ಮಾಡುತ್ತಿದ್ದರು ನಿಖರ ದಿನಾಂಕ ಗೊತ್ತಿಲ್ಲ. ಬ್ಯಾಂಕಿಗೆ ಬರುವ ಪ್ರತಿ ಗ್ರಾಹಕರ ಬಗ್ಗೆ ನನಗೆ ಗೊತ್ತಿಲ್ಲ ಆದರೆ ಆರೋಪಿತರ ಬಗ್ಗೆ ನನಗೆ ಗೊತ್ತಿದೆ. ಚಾಸಾ-1 ರವರ ಮಾತು ಕೇಳಿ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಆರೋಪಿತರು ಯಾವ ಉದ್ದೇಶಕ್ಕಾಗಿ ಬರುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಆದರೆ ಮ್ಯಾನೇಜರವರ ಕ್ಯಾಬಿನಿನಲ್ಲಿ ಇರುತ್ತಿದ್ದರು. ಪಂಚನಾಮೆಗೆ ಮುಂಚೆ ಪೋಲೀಸರು ನನಗೆ ಯಾವುದೆ ನೋಟೀಸ ಕೊಟ್ಟಿಲ್ಲ. ಬ್ಯಾಂಕಿನಲ್ಲಿ ಆ ಸಮಯದಲ್ಲಿ ಎಷ್ಟು ಜನ ಸೇವೆ ಸಲ್ಲಿಸುತ್ತಿದ್ದರು ಗೊತ್ತಿಲ್ಲ. ಸುಮಾರು 7-8 ಜನ ಇದ್ದಿರಬಹುದು. ಪಂಚನಾಮೆಗೆ ಸಹಿ ಮಾಡುವಂತೆ ಚಾಸಾ-1 ರವರು ತಿಳಿಸಿರುತ್ತಾರೆ. ಚಾಸಾ-1 ರವರು ತಾವು ಹೇಳಿದಂತೆ ನಾನು ಕೇಳುತ್ತೇನೆಂದು ಪಂಚನಾಮೆಗೆ ನನ್ನ ಸಹಿ ಮಾಡಿಸಿದ್ದಾರೆ ಅಂದರೆ ಸರಿಯಲ್ಲ. ಪಂಚನಾಮೆಯನ್ನು 2017 ರಲ್ಲಿ ಬರೆದಿದ್ದು ದಿನಾಂಕ ನೆನಪಿಲ್ಲ. ಬೆಳಿಗ್ಗೆ 10-00 ಗಂಟೆಯಿಂದ ಸುಮಾರು ಮಧ್ಯಾಹ್ನ 1-00 ಗಂಟೆವರೆಗೆ ಇದ್ದರು. ಪೋಲೀಸರು ನಮ್ಮ ಬಾ ಕಿಗೆ ಬಂದು ನನ್ನ ಸಮಕ್ಷಮ ಪಂಚನಾಮೆ ಜರುಗಿಸಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಹೆಚ್ಚುವರಿಯಾಗಿ 4 ನೇ ಆರೋಪಿ ಪರ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೇಳಿದ್ದರಿಂದ ಅಳವಡಿಸಿಕೊಳ್ಳಲಾಯಿತು)

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೆ ಸರಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**